## ಸಂಪಾದಕೀಯ

# ತಾಂತ್ರಿಕ ವಿವಿ ಹಗರಣಗಳ ಮೂಟೆಯಾಗದಿರಲಿ

ಕಳೆದ ಬಜೆಟ್‌ನಲ್ಲಿ ಹಾಸನ, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಿಗೆ ಭರಪೂರ ಕೊಡುಗೆ ನೀಡಿ ರಾಜ್ಯದ ಜನರ ಕೆಂಗಣ್ಣಿಗೆ ಗುರಿಯಾಗಿದ್ದ ಸಿಎಂ ಕುಮಾರಸ್ವಾಮಿ, ಈ ಸಲದ ಬಜೆಟನ್ನು ಬಹಳ ಎಚ್ಚರಿಕೆಯಿಂದ ಮಂಡಿಸಿದ್ದರೂ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮರುವಿಂಗಡನೆ ಮಾಡಿ ತವರು ಜಿಲ್ಲೆ ಹಾಸನದಲ್ಲೊಂದು ತಾಂತ್ರಿಕ ವಿಶ್ವವಿದ್ಯಾಲಯ ಸ್ಥಾಪಿಸುವ ನಿರ್ಧಾರ ಕೈಗೊಳ್ಳುವ ಮೂಲಕ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತೇ ಗಡಿ ಜಿಲ್ಲೆ ಬೆಳಗಾವಿಯ ಜನರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ರಾಜ್ಯಾದ್ಯಂತ 200ಕ್ಕಿಂತ ಅಧಿಕ ಎಂಜಿನಿಯರಿಂಗ್ ಕಾಲೇಜುಗಳನ್ನೊಳಗೊಂಡ ವಿಟಿಯುನಿಂದ ಪ್ರತಿವರ್ಷ 4 ಲಕ್ಷ ವಿದ್ಯಾರ್ಥಿಗಳು ಬಿಇ, ಎಂ.ಟೆಕ್, ಎಂಬಿಎ, ಎಂಸಿಎ ಸೇರಿದಂತೆ ಇತರೆ ಕೋರ್ಸ್‌ಗಳ ವ್ಯಾಸಂಗ ಮಾಡಿ ಹೊರಬರುತ್ತಿದ್ದಾರೆ. ಇದರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು ದಕ್ಷಿಣ ಕರ್ನಾಟಕ ಭಾಗದವರು ಎಂದು ದಾಖಲೆಗಳು ತಿಳಿಸುತ್ತವೆ. ಹೀಗಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಭೌಗೋಳಿಕ ಪ್ರದೇಶ ಆಧರಿಸಿ ವಿಟಿಯು ಮರುವಿಂಗಡಣೆ ಮಾಡುವ ನಿರ್ಧಾರ ಸ್ವಾಗತಾರ್ಹವೇ.

ವಿಟಿಯು ವಿಭಜನೆ ಮಾಡುವಂತೆ ಚಿಕ್ಕಬಳ್ಳಾಪುರ, ಕೋಲಾರ, ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ, ಮಾಲೂರು, ಬಂಗಾರಪೇಟೆ, ಮುಳಬಾಗಿಲು ಕ್ಷೇತ್ರಗಳನ್ನು ಪ್ರತಿನಿಧಿಸುವ ಸಚಿವರು, ಶಾಸಕರ ಬಹುದಿನಗಳ ಬೇಡಿಕೆಯೂ ಆಗಿತ್ತು. ಬೆಂಗಳೂರು ವಿವಿ ವಿಭಜನೆ ಹಾಗೂ ಅವಿಭಜಿತ ಆಂಧ್ರಪ್ರದೇಶದ ಜೆಎನ್‌ಟಿಯು ವಿವಿಯನ್ನು ವಿಭಜಿಸಿದಂತೆ ವಿಟಿಯುವನ್ನು ಎರಡು ಭಾಗಗಳನ್ನಾಗಿ ಮಾಡಿ ಸರ್.ಎಂ. ವಿಶ್ವೇಶ್ವರಯ್ಯನವರ ಹುಟ್ಟೂರಾದ ಮುದ್ದೇನಹಳ್ಳಿಯಲ್ಲಿ ಇನ್ನೊಂದು ವಿವಿ ಅಸ್ತಿತ್ವಕ್ಕೆ ತರಬೇಕು ಎಂದು ಆ ಭಾಗದ ಶಾಸಕರು, ಸಚಿವರು, ಶಿಕ್ಷಣ ತಜ್ಞರು ಉನ್ನತ ಶಿಕ್ಷಣ ಇಲಾಖೆಗೆ ಈ ಹಿಂದೆಯೇ ಪತ್ರ ಬರೆದಿದ್ದರು. ಆದರೆ, ಈಗ ಕುಮಾರಸ್ವಾಮಿಯವರು ಮುದ್ದೇನಹಳ್ಳಿ ಬದಲು ಹಾಸನಕ್ಕೆ ವಿವಿಯನ್ನು ಕೊಡುಗೆಯಾಗಿ ನೀಡಲು ಮುಂದಾಗಿದ್ದಾರೆ. ಇದರಲ್ಲಿ ಮುಖ್ಯಮಂತ್ರಿಯವರ ಸ್ವಹಿತಾಸಕ್ತಿ, ತವರು ಪ್ರೇಮ ಮೆರೆದಿದ್ದಾರಾದರೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಭೌಗೋಳಿಕ ಪ್ರದೇಶ ಆಧರಿಸಿ ವಿಟಿಯು ಮರುವಿಂಗಡಣೆ ಮಾಡುವ ನಿರ್ಧಾರ ಉತ್ತಮವಾದದ್ದೇ.

ಮೌಲ್ಯಮಾಪನ ವಿಳಂಬ, ಪರೀಕ್ಷೆ ಪದ್ಧತಿ, ಪಠ್ಯ ಬೋಧನೆ, ಸಿಬ್ಬಂದಿ ನೇಮಕ, ಆರ್ಥಿಕ ಮುಗ್ಗಟ್ಟು ಸೇರಿದಂತೆ ಮತ್ತಿತರ ವಿಷಯಕ್ಕೆ ಬೆಳಗಾವಿಯ ವಿಟಿಯು ಅನೇಕ ಬಾರಿ ಸದ್ದು ಮಾಡಿದೆ. ವಿಟಿಯು ಸ್ಥಾಪನೆಯಾದ 1998ರಿಂದ ಹಗರಣದ ವಿಷಯವಾಗಿಯೇ ಹೆಚ್ಚು ಸುದ್ದಿಯಾಗಿದೆ ಎಂಬುದನ್ನು ಮರೆಯುವಂತಿಲ್ಲ. ಆದ್ದರಿಂದ ಹಾಸನದಲ್ಲಿ ತಲೆ ಎತ್ತಲಿರುವ ನೂತನ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಈ ಸಮಸ್ಯೆಗಳು ಮರುಕಳಿಸದಿರದಂತೆ ಎಚ್ಚರ ವಹಿಸಬೇಕಾದದ್ದೂ ಅಷ್ಟೇ ಮುಖ್ಯವಾಗಿದೆ. ಸಿಬ್ಬಂದಿ ನೇಮಕದಲ್ಲಿ ಪಾರದರ್ಶಕತೆ ಅಳವಡಿಸುವ ಮೂಲಕ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕಿದೆ. ಅಲ್ಲದೇ, ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಟಿಯು ಪ್ರಾದೇಶಿಕ ಕೇಂದ್ರಗಳ ಬಲವರ್ಧನೆಯತ್ತಲೂ ಗಮನಹರಿಸಬೇಕಿದೆ. ನೂತನ ವಿವಿ ಮತ್ತೊಂದು ಹಗರಣಗಳ ಮೂಟೆಯಾಗದಂತೆ ಎಚ್ಚರವಹಿಸಬೇಕಿದೆ.

## ಚಿತ್ರಸ್ಫೂರ್ತಿ



ಬದುಕು ಎಂದೂ ನಿಮ್ಮನ್ನು ಬರಿದಾದ ಅವಸ್ಥೆಯಲ್ಲಿ ಇಡುವುದಿಲ್ಲ. ಎಲ್ಲೋ ಕೊಂಚ ಕಳೆದದ್ದಕ್ಕೆ, ಇನ್ನೆಲ್ಲೋ ಸ್ವಲ್ಪ ನೀಡಿ ಸಮತೋಲ ಸಾಧಿಸಿಯೇ ತೀರುತ್ತದೆ.

## ತಿಳಿಸಾರ

### ದಿನೇದಿನೆ ಹೆಚ್ಚುತ್ತಿರುವ ಟ್ವಿಟರ್ ಜನಪ್ರಿಯತೆ

ಪ್ರಸ್ತುತ 326 ದಶಲಕ್ಷ ಮಂದಿ ನಿಯಮಿತವಾಗಿ ಟ್ವಿಟರ್‌ನಲ್ಲಿ ಸಕ್ರಿಯರಾಗಿದ್ದಾರೆ. ಟ್ವಿಟಿಗರು ಹೇಗೆ ವರ್ತಿಸುತ್ತಾರೆ. ಏನನ್ನು ಸಂವಹಿಸುತ್ತಾರೆ ಹಾಗೂ ಅವರ ಸಂಪರ್ಕದಲ್ಲಿ ಯಾರೆಲ್ಲ ಇದ್ದಾರೆ ಎಂಬುದನ್ನು ನೋಡಿ ಜನ ಅವರನ್ನು ಫಾಲೋ ಮಾಡುತ್ತಾರೆ. ಈ ತಾಣದಲ್ಲಿ ತಮ್ಮ ಯೋಚನೆ, ಭಾವನೆಗಳನ್ನೆಲ್ಲ ಹಂಚಿಕೊಳ್ಳಲು ಎಲ್ಲ ವಯೋಮಾನದವರನ್ನೂ ಅದು ಆಕರ್ಷಿಸಿದೆ.

**24%** 13-17 ವರ್ಷದವರು

**35%** 18-29 ವರ್ಷದವರು

**20%** 30-49 ವರ್ಷದವರು

**11%** 50-55 ವರ್ಷದವರು

**05%** 65 ವರ್ಷ ಮೇಲ್ಪಟ್ಟವರು

## ಕಾಕಾ ಹೋಟ್ಲು

ಧೀರು: ಆಡಿಯೊದಲ್ಲಿ ಮಾತಾಡಿದ್ದು ನಾನೇ ಅಂತ ಬಿಎಸ್‌ವೈ ಒಪ್ಕೊಂಡ್ ಬಿಟ್ರು ಕಣ್ಲಾ..!

ಸುಧೀರು: ಒಪ್ಕೊಳ್ಳಿಲ್ಲಾ ಅಂದ್ರೆ ಮುಂದಿನ ಅಮಾವಾಸ್ಯೆಗೆ ಮತ್ತೊಂದ್ ನಿಂಬೆಹಣ್ಣು ಎಸಿತೀನಿ ಅಂದ್ರಂತೆ ರೇವಣ್ಣ.

# ವಿಷ್ಣು, ಮೋಹಿನಿಯಾಗಿ ಭಸ್ಮಾಸುರನನ್ನು ವಧಿಸಿದ ಕತೆ!

## ತ್ರಿಮೂರ್ತಿಗಳ ಕತೆಗಳು



ಸುಧಾ ಮೂರ್ತಿ
editoped@vishwavani.news

ಒಂದು ಸಾರಿ ಒಬ್ಬ ಅಸುರ ತನ್ನ ಆರಾಧ್ಯ ದೈವ ಬ್ರಹ್ಮನನ್ನು ಕುರಿತು ಪವಿತ್ರ ತಪಸ್ಸನ್ನಾಚರಿಸಿದ. ದೇವರು ಪ್ರತ್ಯಕ್ಷನಾದ ಕೂಡಲೇ, ತಲೆ ಬಾಗಿ ಅವನಿಗೆ ವಂದಿಸಿದ ಅಸುರ ಹೀಗೆ ಬೇಡಿಕೊಂಡ: ಓ ಬ್ರಹ್ಮನೇ, ನಾನು ಯಾರದ್ದಾದರೂ ಶಿರದ ಮೇಲೆ ಕೈ ಇರಿಸಿದ ತಕ್ಷಣ ಅವರು ಬೂದಿಯಾಗಬೇಕು, ಅಂತಹ ವರ ದಯಪಾಲಿಸು!

ಏಕೆ ಎಂದು ಬೆರಗಾಗುವ ಸರದಿ ಬ್ರಹ್ಮನದ್ದು.

ಯಾವುದೇ ಸೇನೆ-ತುಕಡಿಗಳಿಲ್ಲದೆ, ಯುದ್ಧ-ಕದನ ಮಾಡದೆ ಇಡೀ ಜಗತ್ತನ್ನು ಅದರಿಂದ ಗೆಲ್ಲಬಹುದಲ್ಲವೇ ಎಂದುತ್ತರಿಸಿದ ಆ ಭಕ್ತ ಮಹಾಶಯ.

ನಕ್ಕ ದೇವರು ಅಸ್ತು ಎಂದ. ಹಾಗೆಯೇ ಆಗಲಿ, ಇಂದಿನಿಂದ ನಿನ್ನ ಹೆಸರು 'ಭಸ್ಮಾಸುರ' ಎಂದಾಗಲಿದೆ ಎಂದು ಒಂದು ಹೆಸರನ್ನೂ ಕೊಟ್ಟ.

ವರ ದೊರೆತ ಕೂಡಲೇ ಭಸ್ಮಾಸುರನ ತಲೆಗೆ ಮೊದಲು ಬಂದದ್ದು, ಇದರ ಬಲದಿಂದ ತ್ರಿಮೂರ್ತಿಗಳನ್ನು ಸೋಲಿಸಬೇಕು. ಅವರು ತಟಸ್ಥರಾದರೆ ಬೇರೆ ಯಾರೂ ನನ್ನ ದಾರಿಗೆ ಅಡ್ಡಬರಲಾರರು ಎಂದು.

ಅದಷ್ಟೇ ಅಲ್ಲ, ಆ ದುಷ್ಟ ಅಸುರನ ತಲೆಗೆ ಇನ್ನೊಂದು ಘಾತುಕ ವಿಚಾರ ಮಿಂಚಿನ ವೇಗದಲ್ಲಿ ಬಂತು, 'ಈಗೊಮ್ಮೆ ಬ್ರಹ್ಮನ ತಲೆಯ ಮೇಲೆಯೇ ಏಕೆ ಕೈ ಇಡಬಾರದು?' ಭಕ್ತನ ಮನವನ್ನು ಬ್ರಹ್ಮ ಓದಲಾರನೇ? ಕ್ಷಣದ ಹಿಂದೆ ತನ್ನನ್ನು ಕುರಿತು ತಪಸ್ಸಾಚರಿಸಿದವ ಈಗ ತನ್ನನ್ನೇ ಬೂದಿ ಮಾಡಲು ಹೊರಟಿರುವುದನ್ನು ನೋಡಿ ಹೌಹಾರಿದ. ಆದರೆ ಆ ಕೂಡಲೇ ಅಲ್ಲಿಂದ ಓಡುವುದು ಬಿಟ್ಟು ಬೇರೇನೂ ಮಾಡುವಂತಿರಲಿಲ್ಲ. ಎದ್ದೆನೋ, ಬಿದ್ದೆನೋ ಎಂದು ದುಷ್ಟ ಅಸುರನಿಂದ ತಪ್ಪಿಸಿಕೊಳ್ಳಲು ಬ್ರಹ್ಮದೇವ ಓಟ ಕಿತ್ತ. ತಿಂಗಳುಗಟ್ಟಲೆ ಇವರಿಬ್ಬರ ರೇಸ್ ನಡೆಯಿತು. ಮುಂದೆ ಬ್ರಹ್ಮ, ಹಿಂದೆ ಅವನ ಬೆನ್ನಟ್ಟಿ ಭಸ್ಮಾಸುರ ಓಡುತ್ತಿರುವ ದೃಶ್ಯ ಒಳ್ಳೇ ಮೋಜಿನದಾಗಿತ್ತು.

ಜೀವವುಳಿಸಿಕೊಳ್ಳಲು ಬ್ರಹ್ಮ ಬೇರೆ ಮಾರ್ಗ ಕಾಣದೆ ಓಡುತ್ತ ಇರುವಾಗಲೇ ವಿಷ್ಣುವನ್ನು ಪ್ರಾರ್ಥಿಸಿಕೊಂಡ. ತಂದೆಯೇ ನನ್ನನ್ನು ಈ ದುಷ್ಟ ರಾಕ್ಷಸನಿಂದ ನೀನೇ ಕಾಪಾಡಬೇಕು ಎಂದ. ಸದಾ ಇಂತಹ ಪೇಚಿಗೆ ಸಿಲುಕಿಕೊಳ್ಳುವ ಮಗನನ್ನು ವಿಷ್ಣು ತರಾಟೆಗೆ ತೆಗೆದುಕೊಳ್ಳದೇ ಬಿಡಲಿಲ್ಲ. ಅಯೋಗ್ಯರಿಗೆ ಇಂತಹ ಶಕ್ತಿಯುತ ವರಗಳನ್ನು ನೀಡುವುದನ್ನು ನಿಲ್ಲಿಸು, ಯಾವಾಗಲೂ ನಿನ್ನದು ಇದೇ ಅವಾಂತರವಾಯಿತಲ್ಲ ಎಂದು ಛೇಡಿಸಿದ. ಏನು ಮಾಡುವುದು, ಭಕ್ತರು ಅಷ್ಟೊಂದು ಶ್ರದ್ಧಾಭಕ್ತಿಗಳಿಂದ ತಪಸ್ಸಾಚರಿಸಿ ನನ್ನನ್ನು ಒಲಿಸಿಕೊಂಡಾಗ ಅವರು ಕೇಳಿದ ವರ ನೀಡದೆ ಗತ್ಯಂತರವಿಲ್ಲ ಎಂಬಂತಾಗುತ್ತದೆ...ಎಂದು ಬ್ರಹ್ಮನೂ ಪೇಚಾಡಿದ. ಸದ್ಯ ನನ್ನ ಜೀವಕ್ಕೆ ಬಂದಿರುವ ಸಂಚಕಾರ ತೊಲಗಿಸು ಎಂದು ಮತ್ತೆ ಮತ್ತೆ ವಿನಂತಿಸುವುದನ್ನು ಮರೆಯಲಿಲ್ಲ. ಆಯ್ತು ಹೋಗು, ನೋಡೋಣ ಎಂದು ವಿಷ್ಣು ಸಹ ಮುಗುಂ ಆಗಿಯೇ ಉತ್ತರಿಸಿದ.

ಈ ಮಧ್ಯೆ ಒಂದು ಚಮತ್ಕಾರ ನಡೆಯಿತು. ಬ್ರಹ್ಮನ ತಲೆಯ ಮೇಲೆ ಕೈಯಿಡಲು ಅವನನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ ಭಸ್ಮಾಸುರ, ಇನ್ನೇನು ಭೂ ಸೀಮೆ ದಾಟಬೇಕು ಎನ್ನುವಷ್ಟರಲ್ಲಿ ತುಂಬ ಸೌಂದರ್ಯವತಿಯೊಬ್ಬಳು ಹತ್ತಿರದ ಉದ್ಯಾನದಲ್ಲಿ ಅಡ್ಡಾಡುತ್ತಿರುವುದು ಅವನ ಕಣ್ಣಿಗೆ ಬಿತ್ತು. ಆಕೆಯಿಂದ ಕಣ್ಣು ಕೀಳದಾದ ರಾಕ್ಷಸ, ಎಂತಹ ಅನುಪಮ ಚೆಲುವು, ನನ್ನ ಜೀವಮಾನದಲ್ಲಿಯೇ ಇಂತಹ ಸ್ತ್ರೀಯನ್ನು ನೋಡಿಲ್ಲವಲ್ಲ, ರಂಭೆ, ಮೇನಕೆಯಂತಹ ಅಪ್ಸರೆಯರನ್ನು ಈಕೆಯ ಮುಂದೆ ನಿವಾಳಿಸಬೇಕು ಅಂತಹ ಸೌಂದರ್ಯದ ಖನಿಯಾಗಿದ್ದಾಳೆ ಎಂದುಕೊಂಡ. ಈಗವನು ಬ್ರಹ್ಮನ ಬೆನ್ನಟ್ಟುವುದು ಮರೆತು ಉದ್ಯಾನ ಪ್ರವೇಶಿಸಿದ.



ತನ್ನೆದುರು ಬಂದು ನಿಂತ ಕಂಡ ಭಸ್ಮಾಸುರನನ್ನು ನೋಡಿ ಆ ಚೆಲುವೆ ಸೌಜನ್ಯಪೂರ್ವಕವಾಗಿ ಒಂದು ಮುಗುಳು ನಗೆ ಬೀರಿದಳು. ಉತ್ತೇಜಿತನಾದ ಭಸ್ಮಾಸುರ, ಆಕೆಯ ಮುಖಸ್ತುತಿ ಮಾಡಿ, ತನ್ನ ಮೆಚ್ಚುಗೆಯನ್ನು ಪ್ರಕಟಪಡಿಸಿ, ತನ್ನ ಕುರಿತೂ ಹೇಳಿಕೊಂಡ. ಓ ಸೌಂದರ್ಯವತಿಯೇ, ನನ್ನ ಹೆಸರು ಭಸ್ಮಾಸುರ. ಬ್ರಹ್ಮನಿಂದ ಒಂದು ಶಕ್ತಿಶಾಲಿ ವರವನ್ನು ಪಡೆದಿದ್ದೇನೆ. ಯಾರದಾದರೂ ಶಿರದ ಮೇಲೆ ನಾನು ಕೈಯಿಟ್ಟ ಕೂಡಲೇ ಅವರು ಸುಟ್ಟು ಬೂದಿಯಾಗುತ್ತಾರೆ. ಈಗ ವರ ನೀಡಿದ ಬ್ರಹ್ಮನನ್ನೂ ಸೇರಿಸಿದಂತೆ ಯಾರೂ ನನ್ನನ್ನು ಮಣಿಸಲಾರರು. ನಾನು ನಿನ್ನನ್ನು ವರಿಸಲು ಬಯಸುತ್ತೇನೆ ಎಂದು ತನ್ನ ಮನದಿಂಗಿತ ಹೇಳಿಕೊಂಡ.

ಸುಂದರಿ ಈಗ ಮಂದಹಾಸ ಬೀರಿದಳು.

ಭಸ್ಮಾಸುರ ತನ್ನ ಪ್ರವರ ಮುಂದುವರಿಸಿದ. ನನ್ನಂತಹವನು ನಿನ್ನನ್ನು ಮದುವೆಯಾಗಲು ಇಚ್ಛಿಸುವುದು ನಿನ್ನ ಸೌಭಾಗ್ಯ ಎಂದು ತಿಳಿದುಕೋ. ನನ್ನ ರಾಣಿಯಾಗಲು ಒಪ್ಪಿದರೆ ಎಲ್ಲರೂ ನಿನ್ನ ಕಾಲಬುಡದಲ್ಲಿ ನಿಲ್ಲುವಂತೆ ಮಾಡಬಲ್ಲ ಶಕ್ತಿಶಾಲಿ ನಾನು ಎಂಬುದನ್ನು ಅರಿತುಕೋ. ಅದೆಲ್ಲ ಹಾಗಿರಲಿ, ಮೊದಲು ನಿನ್ನ ಹೆಸರೇನು ಹೇಳು ಎಂದ.

ತಲೆಬಾಗಿ ಅಸುರನಿಗೆ ವಂದಿಸಿದ ಸುಂದರಿ ಹೇಳಿದಳು: ದೊರೆಯೇ ನನ್ನ ಹೆಸರು ಮೋಹಿನಿ. ನಿನ್ನಂತಹ ಪರಾಕ್ರಮಶಾಲಿ ನನ್ನನ್ನು ವರಿಸಲು ಮುಂದೆ ಬಂದಿರುವುದು ನನಗಾದರೂ ಹೆಮ್ಮೆಯ ವಿಷಯವೇ. ಆದರೆ ಒಂದು ವಿಷಯ ಸ್ಪಷ್ಟಪಡಿಸುವೆ. ನಾನು ತುಂಬ ಒಳ್ಳೆಯ ನೃತ್ಯಾಂಗನೆಯಾಗಿರುವುದರಿಂದ ನನ್ನ ಪತಿಯಾಗುವಾತ ಸಹ ಉತ್ತಮ ನೃತ್ಯಪಟು ಆಗಿರಬೇಕೆಂದು ಬಯಸುತ್ತೇನೆ. ಅಂತಹವರನ್ನೇ ವರಿಸುವೆ ಎಂದು ಪ್ರತಿಜ್ಞೆ ಮಾಡಿದ್ದೇನೆ. ಹೀಗಾಗಿ ನನ್ನನ್ನು ವಿವಾಹವಾಗ ಬಯಸುವ ಯಾವುದೇ ಪುರುಷ ಈ ಷರತ್ತನ್ನು ಪೂರ್ಣಗೊಳಿಸುವಂತಿರಬೇಕು, ಉಳಿದ ಏನೂ ನನಗೆ ಲೆಕ್ಕವಿಲ್ಲ ಎಂದಳು.

ಭಸ್ಮಾಸುರನಿಗೆ ಈಗ ಪೇಚಿಗಿಟ್ಟುಕೊಂಡಿತು. ಅಯ್ಯೋ ನೃತ್ಯದ ಗಂಧ-ಗಾಳಿ ನನಗೆ ತಿಳಿಯದಲ್ಲ ಮೋಹಿನಿ ಎಂದು ಮುಜುಗರ ಪಟ್ಟುಕೊಂಡ. ಯಾರನ್ನು ಬೇಕಾದರೂ ನಿನ್ನ ತಾಳಕ್ಕೆ ತಕ್ಕಂತೆ ಕುಣಿಸುವ ಶಕ್ತಿ ಉಳ್ಳ ಈ ಅಸುರನಿಗೆ ಸ್ವತಃ ಕುಣಿಯುವುದು ಬರದಲ್ಲಾ ಎಂದು ಹಲುಬಿದ.

ಅಯ್ಯೋ ಶೂರನೇ, ನೃತ್ಯ ಕಲಿಯುವುದು ಯಾವ ಮಹಾ ಬ್ರಹ್ಮವಿದ್ಯೆ? ನೀನು ಬಯಸಿದರೆ ಈಗಿಂದೀಗ ನಿನ್ನ ಗುರುವಾಗಿ ಅದನ್ನುಕಲಿಸುತ್ತೇನೆ. ನಿನ್ನಂತಹ ಪ್ರತಿಭಾವಂತ ಅತಿ ಶೀಘ್ರವಾಗಿ ಅದನ್ನು ಕಲಿಯಬಲ್ಲ ಎಂಬ ವಿಶ್ವಾಸವೂ ನನಗಿದೆ. ಏನೆನ್ನುತ್ತೀ, ನೀನು ಆಗಲಿ ಎಂದು ಸಮ್ಮತಿಸಿದರೆ ನನ್ನ ಸಂತಸಕ್ಕೆ ಪಾರವೇ ಇಲ್ಲವಾಗುತ್ತದೆ. ದಯವಿಟ್ಟು ಒಪ್ಪಿಕೋ ಎಂದೆಲ್ಲ ಪುಸಲಾಯಿಸಿದಳು ಮೋಹಿನಿ.

ಭ್ರಮಿಷ್ಟನಂತೆ ಆಕೆಯತ್ತ ನೋಡಿದ ಭಸ್ಮಾಸುರ. ಮಿಂಚುವ ಆಕೆಯ ಕಂದುಕಣ್ಣುಗಳ ಆಕರ್ಷಣೆಯಲ್ಲಿ ಕೊಚ್ಚಿಹೋದ. ನೃತ್ಯಗಾರನನ್ನೇ ಮದುವೆಯಾಗಬೇಕೆಂಬ ಆಕೆಯ ಅಭಿಲಾಶೆ, ಕಕ್ಕುಲಾತಿಯಲ್ಲಿ ಅವನಿಗೆ ಶಂಕೆ ಕಾಣಲಿಲ್ಲ. ಏನಂತೆ, ಮೋಹಿನಿಯನ್ನು ಸಂಪ್ರೀತಗೊಳಿಸಲು ಸ್ವಲ್ಪ ನೃತ್ಯ ಕಲಿತರೆ ನನ್ನ ಗಂಟೇನೂ ಹೋಗುವುದಿಲ್ಲ ಎಂದುಕೊಂಡ. ಆಕೆಯನ್ನು ಮೆಚ್ಚಿಸಿದರೆ ಸುಂದರಿ ಒಲಿದು ಬರುತ್ತಾಳೆ. ನನ್ನ ಪರಾಕ್ರಮ ಹಾಗೂ ಆಕೆಯ ಸೌಂದರ್ಯ ಎಂತಹ ಒಳ್ಳೆಯ ಸಂಯೋಗ... ಎಂದೆಲ್ಲ ಮನದಲ್ಲೇ ಯೋಚಿಸಿದ. ಈ ಲೋಕದ ಅತ್ಯಂತ ಪರಿಪೂರ್ಣ ಜೋಡಿ ನಮ್ಮದು ಎಂದೆನಿಸಿಕೊಳ್ಳುತ್ತದೆ. ಎಲ್ಲರನ್ನೂ ಆಳಿ, ಹಿಡಿತದಲ್ಲಿಟ್ಟುಕೊಳ್ಳಬಹುದು ಎಂಬ ಯೋಚನೆ ಬಂದ ಕೂಡಲೇ ಆಯಿತು ನೃತ್ಯ ಕಲಿಯುತ್ತೇನೆ ಎಂದು ಸಿದ್ಧನಾಗಿ ನಿಂತ.

ವಿಳಂಬ ಮಾಡದೆ ಮೋಹಿನಿ ನರ್ತನದ ಪಾಠಗಳನ್ನು ಪ್ರಾರಂಭಿಸಿಯೇ ಬಿಟ್ಟಳು.

'ಎಲ್ಲಿ ಎಡಕ್ಕೆ ತಿರುಗು, ಅಲ್ಲಿ ಎರಡು ಹೆಜ್ಜೆ ಇಡು, ಈಗ ಬಲಕ್ಕೆ, ಹ್ಞಾಂ, ತುಂಬ ಸರಿಯಾಗಿದೆ', ಎಂದು ಪುಸಲಾಯಿಸುತ್ತಾ, ಅನುನಯಿಸುತ್ತಾ ಭಸ್ಮಾಸುರನನ್ನು ಕುಣಿಸಹತ್ತಿದ್ದಳು, ಮೋಹಿನಿ.

ಮೂರ್ಖ ಅಸುರ ಮೊದಲೇ ಆಕೆಯ ಚೆಲುವಿಗೆ ಚಿತ್ತಾಗಿದ್ದ. ಈಗಂತೂ ಅವಳ ಹೊಗಳಿಕೆಯಿಂದ ಉಬ್ಬಿಹೋದ. ನರ್ತನ ವೇನೋ ಭಯಂಕರವಾಗಿತ್ತು. ಅನುಪಮ ಲಾವಣ್ಯದಿಂದ ಅಂಗಚಲನೆ ಮಾಡುತ್ತಾ, ಮೋಹಕವಾಗಿ ಆ ರಾಕ್ಷಸನನ್ನು ಸೆಳೆಯುತ್ತಾ ಇದ್ದ ಮೋಹಿನಿಯ ಪಾಶದಲ್ಲಿ ಅವನು ಸಂಪೂರ್ಣ ಸಿಕ್ಕಿಬಿದ್ದ.

ಈಗೊಂದಷ್ಟು ಭಾವಭಂಗಿ ಕಲಿಸುತ್ತೇನೆ ಎಂದು ಮೋಹಿನಿ, ಎಡ ಕೈ ಚಾಚು, ಅದನ್ನು ಎಡ ಭುಜದ ಮೇಲಿಟ್ಟುಕೋ, ಈಗ ಬಲಗೈ ಚಾಚು, ಅದನ್ನು...ಎಂದು ನಿರ್ದೇಶನ ನೀಡುತ್ತಾ, ಒಮ್ಮೆಗೇ ಈಗ ಎಡ ತೋಳನ್ನು ಹಿಂದೆ ಮುಂದೆ ಆಡಿಸುತ್ತಾ, ಬಲಗೈಯನ್ನು ಶಿರದ ಮೇಲಿಟ್ಟುಕೋ ಅಂದಳು.

ಮೋಹಿನಿ ಏನು ಹೇಳುತ್ತಿದ್ದಾಳೆ, ಆಕೆ ಹೇಳಿದಂತೆ ಮಾಡಿದರೆ ಆಗುವ ಪರಿಣಾಮ ಏನು ಎಂಬುದು ಭಸ್ಮಾಸುರನಿಗೆ ಸ್ವಲ್ಪವೂ ಅರಿವಾಗದಷ್ಟು ಮೋಹದಲ್ಲಿ ಅವನು ಕುರುಡಾಗಿದ್ದ. ಚಾಚೂ ತಪ್ಪದೆ, ಎಡ ತೋಳನ್ನು ಹಿಂದೆ ಮುಂದೆ ಆಡಿಸುತ್ತಾ ತನ್ನ ಬಲಗೈಯನ್ನು ತೆಗೆದು ತಲೆಯ ಮೇಲಿಟ್ಟುಕೊಂಡ. ಅಷ್ಟೇ.

ಮರುಕ್ಷಣ ಆಕೆಯ ಮುಂದೆ ಒಂದು ಬೂದಿಯ ರಾಶಿ ಇತ್ತು. ಭಸ್ಮಾಸುರ ತಾನು ಪಡೆದುಕೊಂಡ ವರಕ್ಕೆ ಸ್ವಯಂ ಬಲಿಯಾಗಿದ್ದ.

ಮೋಹಿನಿ ತತ್‌ಕ್ಷಣ ವಿಷ್ಣುವಿನ ರೂಪ ತಳೆದು ನಿಂತಳು!

ಮೋಹಿನಿ ಮತ್ತು ಭಸ್ಮಾಸುರರ ನಡುವೆ ನಡೆದ ಈ ಘಟನೆಯನ್ನು ಕಲಾಕೃತಿಯಾಗಿಸಿದ ಅನೇಕ ಪೇಂಟಿಂಗ್‌ಗಳಿವೆ. ಅವುಗಳಲ್ಲಿ ಕರ್ನಾಟಕದ ಬೇಲೂರು ದೇವಸ್ಥಾನದಲ್ಲಿರುವ ಶಿಲ್ಪ ಅತ್ಯಂತ ಚಿತ್ತಾಕರ್ಷಕವಾಗಿದೆ. ತನ್ನ ಬಲಗೈ ತಲೆಯ ಮೇಲಿಟ್ಟು ನರ್ತಿಸುತ್ತಿರುವ ಮೋಹಿನಿಯನ್ನು ಶಿಲ್ಪಿ ಅಲ್ಲಿ ಅಮರವಾಗಿಸಿದ್ದಾನೆ.

# ಅಮೇಜಾನ್ ಸಾಮ್ರಾಜ್ಯ ಕಟ್ಟಿದ ಜೆಫ್‌ಬಿಜೋಸ್ ಹೀಗೇಕಾದ?

## ಯಶೋಗಾಥೆ



ಶಿಶಿರ ಹೆಗಡೆ, ಶಿಕಾಗೋ
editoped@vishwavani.news

ಅಮೆಜಾನ್. ಈ ಹೆಸರು ಮೊದಲು ಕೇಳಿದ್ದು ಪ್ರಾಥಮಿಕ ಶಾಲೆಯಲ್ಲಿ ಭೂಗೋಳವನ್ನು ಓದುವಾಗ. ದಕ್ಷಿಣ ಅಮೆರಿಕದ 'ಅಮೆಜಾನ್' ಕಾಡಿನ ಬಗ್ಗೆ ಮತ್ತು ಹರಿಯುವ ನದಿಯ ಬಗ್ಗೆ ಆಗ ಓದಿದ್ದೆವು. ಸರಿ ಸುಮಾರು 20 ವರ್ಷದ ನಂತರ ಇಂದು ಜಗತ್ತಿನ ಹೆಚ್ಚಿನವರನ್ನು ಅಮೆಜಾನ್ ಏನೆಂದು ಕೇಳಿದರೆ ಅವರೆಲ್ಲರಿಗೆ 'ಅಮೆಜಾನ್.ಕಾಮ್' ಮೊದಲಿಗೆ ಮನಸ್ಸಿಗೆ ಬರುತ್ತದೆ. ಇಂದು ಈ ಒಂದು ಕಂಪನಿ ಅದ್ಯಾವ ಪರಿ ಬೆಳೆದು ನಿಂತಿದೆಯೆಂದರೆ, ಕಂಪನಿಯಿಂದಲೇ ನದಿಗೆ, ಕಾಡಿಗೆ ಆ ಹೆಸರು ಬಂದಿತೇನೋ ಎನ್ನುವ ಮಟ್ಟಿಗೆ, ಎಲ್ಲ ಎಲ್ಲೆಗಳನ್ನು ಮೀರಿ. ಅಂದು ನಾವು ಕಲಿತಿದ್ದೆವು- ಅಮೆಜಾನ್ ಕಾಡಿನಲ್ಲಿ ಕಾಣಸಿಗದ ಜೀವ ಸಂಕುಲವಿಲ್ಲ, ಅಷ್ಟು ವೈವಿಧ್ಯ. ಇಂದು ಅಮೆಜಾನ್.ಕಾಮ್ ನಲ್ಲಿ ಸಿಗದ ವಸ್ತುವೇ ಜಗತ್ತಿನಲ್ಲಿ ಇಲ್ಲ ಎಂದರೆ ಅತಿಶಯವಲ್ಲ. ಇಂತಹ ಒಂದು ಬೃಹತ್ ಕಂಪನಿಯನ್ನು ಕಟ್ಟಿ ಬೆಳೆಸಿ ಇಂದಿಗೂ ಮುನ್ನಡೆಸುತ್ತಿರುವುದೇ ಅದರ ಸ್ಥಾಪಕ, ಅಧ್ಯಕ್ಷ, ಸಿಇಒ ಜೆಫ್ ಬೆಜೋಸ್. ಏನೇನೂ ಹಿನ್ನೆಲೆಯಿಲ್ಲದ- ಗಾಡ್ ಫಾದರ್ ಇಲ್ಲದ ಒಬ್ಬ ವ್ಯಕ್ತಿ ಅದೆಂಥ ಸಾಮ್ರಾಜ್ಯವನ್ನು ಕಟ್ಟಬಲ್ಲ ಎನ್ನುವುದಕ್ಕೆ ಜೆಫ್ ಗೆ ಸಾದೃಶ ಇನ್ನೊಬ್ಬರಿಲ್ಲ.

ಜೆಫ್ ಹುಟ್ಟಿದ್ದು ಅಮೆರಿಕದ ಅಲ್ಬುಕರ್ಕಿ ಯಲ್ಲಿ. ಕಲಿತದ್ದು ಮತ್ತು ಬೆಳೆದದ್ದೆಲ್ಲ ಹೂಸ್ಟನ್ ನಲ್ಲಿ. ನಂತರ ಪ್ರಿನ್ಸ್ಟನ್ ಯೂನಿವರ್ಸಿಟಿಯಲ್ಲಿ ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಪದವಿ. ನಂತರ ಸುಮಾರು 9 ವರ್ಷಗಳ ಕಾಲ ನ್ಯೂ ಯಾರ್ಕಿನಲ್ಲಿ ನಾಲ್ಕಾರು ಕಂಪನಿಗಳಲ್ಲಿ ಕೆಲಸ. ತನ್ನ ಚತುರತೆಯಿಂದ ಕಲಿಕೆ ಮುಗಿದ ಕೇವಲ 8 ವರ್ಷಗಳಲ್ಲಿ ಕೆಲಸ ಮಾಡುತ್ತಿದ್ದ ಕಂಪನಿಯ ಉಪಾಧ್ಯಕ್ಷ ಸ್ಥಾನದವರೆಗೆ ಬೆಳೆದುಬಿಟ್ಟ. ಆಗ ಜೆಫ್ ನ ವಯಸ್ಸು ಕೇವಲ 30. ಅದಾಗಲೇ ಮದುವೆ ಕೂಡ ಆಗಿತ್ತು. ಅಂತಹ ಸಂದರ್ಭದಲ್ಲಿ ತನ್ನ ಕೆಲಸಕ್ಕೆ ಒಂದು ಬೆಳಗ್ಗೆ ರಾಜೀನಾಮೆ ಕೊಟ್ಟುಬಿಟ್ಟ. ಆತನ ಜಾಗದಲ್ಲಿ ಬೇರೆ ಯಾರೇ ಇದ್ದರೂ ಅಂತಹ ಉನ್ನತ ಹುದ್ದೆಯ ಕೆಲಸವನ್ನು ಬಿಡುವ ಮತ್ತು ಇನ್ನೊಂದು ಹೊಸ ಸಾಹಸಕ್ಕೆ ಕೈ ಹಾಕುವ ಯೋಚನೆಯನ್ನೂ ಮಾಡುತ್ತಿರಲಿಲ್ಲವೇನೋ. ಕೈ ತುಂಬಾ ಸಂಬಳ, ಉಪಾಧ್ಯಕ್ಷ ಸ್ಥಾನ ಮತ್ತು ಹೊಸ ಜೀವನ ಸಂಗಾತಿ ಎಲ್ಲವೂ ಅವನದಾಗಿದ್ದ ಸಮಯವದು.

ಆದರೆ ಮೊದಲಿನಿಂದಲೂ ಸುಮ್ಮನೆ ಕೂರುವ ವ್ಯಕ್ತಿಯಾಗಿರದಿದ್ದ ಜೆಫ್, ತನ್ನ ಹೆಂಡತಿಯೊಂದಿಗೆ ಕೆಲಸಕ್ಕೆ ಕೈ ಮುಗಿದು ಕಾರ್‌ನಲ್ಲಿ ಅಮೆರಿಕದ ಪೂರ್ವದಲ್ಲಿರುವ ನ್ಯೂಯಾರ್ಕ್ ನಿಂದ ಪಶ್ಚಿಮದ ಕಡೆಗೆ ಹೊರಟ. ಆ ಕ್ಷಣದಲ್ಲಿ ಏನಾದರೂ ಮಾಡಬೇಕೆಂಬ ಉತ್ಕಟ ಹುಚ್ಚು ಮಾತ್ರ ಅವನ ಬಳಿ ಇತ್ತು. ಏನು ಮಾಡಬೇಕು, ಎಲ್ಲಿಗೆ ಹೋಗಬೇಕು ಎಂಬ ವಿಚಾರ ಕೂಡ ಕೆಲಸ ಬಿಡುವ ಸಮಯದಲ್ಲಿ ಮಾಡಿರಲಿಲ್ಲ. ಮನೆಯ ಸಾಮಾನುಗಳನ್ನು ಸಾಗಿಸಲು ಬಂದಿದ್ದ ಲಾರಿ ಡ್ರೈವರ್ ಬಳಿ, ಪಶ್ಚಿಮಕ್ಕೆ ತನ್ನ ಸಾಮಾನುಗಳನ್ನು ಸಾಗಿಸಿ, ಮಾರ್ಗಮಧ್ಯೆ ಯಾವ ಊರಿಗೆ ಹೋಗಬೇಕೆಂದು ಹೇಳುತ್ತೇನೆ ಎಂದು ಹೇಳಿದ್ದನಂತೆ. ಈ ತರಹದ ನಿರ್ಣಯಗಳನ್ನು ಜೆಫ್ ನಂಥವರು ಮಾತ್ರ ತೆಗೆದುಕೊಂಡಾರು.

1994. ಅಮೆರಿಕದ ಪಶ್ಚಿಮದಲ್ಲಿರುವ ಸಿಯಾಟಲ್ ಎಂಬ ಊರಿನಲ್ಲಿ ನೆಲೆಸಿದ್ದ ಮೈಕ್ರೋಸಾಫ್ಟ್ ನ ಬಿಲ್ ಗೇಟ್ಸ್ ಅದಾಗಲೇ ಹೆಸರುವಾಸಿ. ಅದಾಗಲೇ ಇಂಟರ್ನೆಟ್ ಕೂಡ ಹುಟ್ಟಿಯಾಗಿತ್ತು. ಆಗ ಇಂಟರ್ನೆಟ್ ಬಳಕೆ ಸರಿ ಸುಮಾರು 2300% ವೇಗದಲ್ಲಿ ಬೆಳೆಯುತ್ತಿತ್ತು. ಇದೇ ಕಾರಣಕ್ಕೆ ಮತ್ತು ಸಿಯಾಟಲ್ ಗೆ ಹೋದರೆ ತನ್ನಂತಹ ಕಂಪ್ಯೂಟರ್ ನುರಿತರು ಸಿಕ್ಕಿ ಏನಾದರೂ ಮಾಡಿಯೇನು ಎನ್ನುವ ಕಾರಣದಿಂದಲೇ ಟ್ರಕ್ ಡ್ರೈವರ್ ಗೆ ಸಾಮಾನನ್ನು ಅಲ್ಲಿಗೆ ಒಯ್ಯಲು ಹೇಳಿದ್ದ. ಆ ಊರಿನಲ್ಲೊಂದು ಎರಡು ಬೆಡ್‌ರೂಮಿನ ಮನೆ ಬಾಡಿಗೆಗೆ ಪಡೆದು ತನ್ನ ಕಾರ್ ಶೆಡ್ಡಿನಲ್ಲಿ ಅಮೆಜಾನ್.ಕಾಮ್ ನ ಮೊದಲ ನೀಲ ನಕ್ಷೆ ತಿಂಗಳೊಳಗೆ ಸಿದ್ಧ ಪಡಿಸಿದ.

1994 ರಲ್ಲಿ ಹುಟ್ಟಿದ ಅಮೆಜಾನ್ ನ ಮೊದಲ ಉದ್ದೇಶ ಇಂಟರ್ನೆಟ್ಟಿನಲ್ಲಿ ಪುಸ್ತಕಗಳನ್ನು ಮಾರುವುದಕ್ಕಷ್ಟೇ ಸೀಮಿತವಾಗಿತ್ತು. ತನ್ನ ಜಾಲತಾಣದಲ್ಲಿ ಒಂದಿಷ್ಟು ಪುಸ್ತಕಗಳ ಚಿತ್ರಗಳನ್ನು ಹಾಕಿ ಅದನ್ನು ಪೋಸ್ಟ್ ಮೂಲಕ ಕಳಿಸಿ ಮಾರಾಟಮಾಡುವುದು ಮೊದಲ ಆಲೋಚನೆ. ಮೊದಲ ದಿನ ಜೆಫ್ ಅಮೆಜಾನ್ ಅನ್ನು ಪ್ರಾರಂಭಿಸಿದಾಗ ತನ್ನ ಕಂಪ್ಯೂಟರಿನಲ್ಲಿ ಒಂದೊಂದು ಆರ್ಡರ್ ಬಂದಾಗಲೂ ಒಂದು ಬೀಪ್ ಶಬ್ದ ಬರುವಂತೆ ವ್ಯವಸ್ಥೆ ಮಾಡಿಕೊಂಡಿದ್ದನಂತೆ- ಆ ಶಬ್ದ ಬಂದ ಕೂಡಲೇ ಎಲ್ಲಿಲ್ಲದ ಹರ್ಷ. ಕಂಪ್ಯೂಟರಿನತ್ತ ಓಡಿ, ಯಾವ ಪುಸ್ತಕಕ್ಕೆ ಆರ್ಡರ್ ಬಂದಿದೆಯೆಂದು ನೋಡಿ ಥಟ್ಟನೆ ಅದನ್ನು ಹುಡುಕಿ, ಅದನ್ನು ಪ್ಯಾಕ್ ಮಾಡಿ ಕಳುಹಿಸಿಕೊಡುತ್ತಿದ್ದನಂತೆ. ಇದು ಶುರುವಾದ ಒಂದೆರಡು ದಿನಗಳಲ್ಲೇ ಮಧ್ಯ ರಾತ್ರಿ ಎಲ್ಲ ಬೀಪ್ ಕೇಳಿಸುತ್ತಿತ್ತು- ರಾತ್ರಿ ಇಡೀ ಕೂತು ಪ್ಯಾಕ್ ಮಾಡಿ ಬೆಳಗ್ಗೆ ಎಲ್ಲರಿಗಿಂತ ಮೊದಲು ಪೋಸ್ಟ್ ಆಫೀಸ್ ಗೆ ಹೋಗಿ ಬಾಗಿಲು ತೆಗೆಯುವುದನ್ನೇ ಕಾಯುತ್ತಿದ್ದನಂತೆ. ಅಮೆಜಾನ್ ಪ್ರಾರಂಭದ ದಿನಗಳಲ್ಲೇ ಅದೆಷ್ಟು ಬೇಗ ಖ್ಯಾತಿ ಪಡೆಯಿತೆಂದರೆ, ಕೇವಲ ಒಂದು ತಿಂಗಳಲ್ಲಿ ಕಂಪ್ಯೂಟರಿನ ಆನಂದ ಕೊಡುತ್ತಿದ್ದ ಬೀಪ್ ಶಬ್ದ ಕ್ರಮೇಣ ಕಿರಿ ಕಿರಿಯಾಗಲು ಶುರುವಾಗಿ ಬಂದ್ ಮಾಡಬೇಕಾಯಿತಂತೆ!

ಜೆಫ್ ಮತ್ತು ಅಮೆಜಾನ್ ಹಾದಿ ಯಾವತ್ತೂ ಸುಲಭದ್ದಾಗಿರಲಿಲ್ಲ. ಶುರುವಾದ ಕೇವಲ 3 ತಿಂಗಳಲ್ಲಿ ಜೆಫ್ ನ ಈ ಪುಸ್ತಕ ಖರೀದಿ ಮತ್ತು ಮಾರಾಟ ಅಮೆರಿಕದ ಪುಸ್ತಕ ಮಳಿಗೆಗಳನ್ನು ಆತನತ್ತ ನೋಡುವಂತೆ ಮಾಡಿತು. ಸಹಜವಾಗಿಯೇ ಅವು ಕೂಡ ಇಂಟರ್ನೆಟ್ ನ ಮೂಲಕ ಪುಸ್ತಕಗಳನ್ನು ಮಾರಲು ತಮ್ಮದೇ ವೆಬ್ ಸೈಟ್‌ಅನ್ನು ಶುರು ಮಾಡಿಕೊಂಡವು. ಆದರೆ ಅದಾಗಲೇ ಅಮೆಜಾನ್ ಕೇವಲ ಪುಸ್ತಕಕ್ಕಷ್ಟೇ ಸೀಮಿತಗೊಳ್ಳದೆ ಅದರೊಂದಿಗೆ ಇನ್ನಿತರ ಕೆಲ ಆಟಿಕೆ ಸಾಮಾನುಗಳನ್ನು ಮಾರಾಟ ಮಾಡಲು ಶುರು ಮಾಡಿಯಾಗಿತ್ತು. ಯಥಾ ಪ್ರಕಾರ ಆಟಿಕೆ ಅಂಗಡಿಗಳು ವೆಬ್‌ಸೈಟ್ ಶುರುಮಾಡಿ ಪೈಪೋಟಿ ಕೊಡುವುದು ಅದನ್ನು ಹಿಂಬಾಲಿಸಿತು. ಕ್ರಮೇಣ ಎಲ್ಲ ವರ್ಗದ, ವೈವಿಧ್ಯದ ವ್ಯಾಪಾರಿಗಳೂ ಅಧಿಕೃತ ವೆಬ್ ಸೈಟ್ ಶುರುಮಾಡಿಕೊಂಡವು. ಆ ಹಂತದಲ್ಲಿ ಕೆಲವರು ಕ್ರಮೇಣ ಅಮೆಜಾನ್ ದಿವಾಳಿಯಾಗುತ್ತದೆಯೆಂದೇ ಮಾತನಾಡಿಕೊಂಡರು. ಆದರೆ ಹಾಗಾಗಲಿಲ್ಲ.

ವಿಧವಿಧವಾದ ಸಾಮಗ್ರಿ, ಮಾರುವ ಅಂಗಡಿಗಳ ವೆಬ್ ಸೈಟ್‌ಗೆ ಅದರದೇ ಮಿತಿಯಿತ್ತು- ತನ್ನ ಅಂಗಡಿಯಲ್ಲಿ ಸಿಗುವ ಸಾಮಾನುಗಳನ್ನಷ್ಟೇ ಅವು ಮಾರುತ್ತಿದ್ದವು. ಒಂದೊಂದು ರೀತಿಯ ಸಾಮಾನನ್ನು ಖರೀದಿಸಲು ಗ್ರಾಹಕ ಒಂದೊಂದು ತಾಣದ ಕಡೆಗೆ ಹೋಗಬೇಕಿತ್ತು. ಆದರೆ ಅಮೆಜಾನ್ ಒಂದರಲ್ಲೇ ಅದೆಲ್ಲ ಸಾಮಾನುಗಳು ಸಿಗುತ್ತಿದ್ದುದರಿಂದ ಜನರೆಲ್ಲಾ ಅಮೆಜಾನ್ ಅನ್ನು ನೆಚ್ಚಿಕೊಂಡರು. ಹಾಗಾಗಿ ಮತ್ತು ಅಮೆಜಾನ್ ನ ಗ್ರಾಹಕ ಕೇಂದ್ರಿತ ವ್ಯವಸ್ಥೆಯಿಂದಾಗಿ ಹೆಚ್ಚೆಚ್ಚು ಜನರು ಅದಕ್ಕೆ ಪ್ರಥಮ ಆದ್ಯತೆ ನೀಡಿದರು. ಇದಕ್ಕೆ ಪುಟವಿಡುವಂತೆ ಜೆಫ್, ಸದಾ ತನ್ನ ಕಂಪನಿಯಲ್ಲಿ ಹೊಸತನ್ನು ತರುತ್ತ ಹೋದ- ಕಂಪನಿ ಬೆಳೆಯುತ್ತ ಹೋಯಿತು. ಕಂಪನಿ ಶುರುವಾದ ಕೇವಲ 3 ವರ್ಷದಲ್ಲಿ ಬಹಳಷ್ಟು ಬಿಲಿಯನೇರ್ ಗಳು, ದೊಡ್ಡ ದೊಡ್ಡ ಕಂಪನಿಗಳು ಕೊಟ್ಟು ಕಂಪನಿಯನ್ನು ಖರೀದಿಸಲು ಮುಂದೆ ಬಂದರು. ಜೆಫ್ ಸುಮ್ಮನೆ ಮಾರಾಟ ಮಾಡಿ ಬಂದ ಹಣದಿಂದ ಅತ್ಯುತ್ತಮ ಐಷಾರಾಮೀ ನಿವೃತ್ತ ಜೀವನವನ್ನು ಸಾಗಿಸಬಹುದಿತ್ತು, ಆದರೆ ಅದು ಆತನ ಜಾಯಮಾನವಾಗಿರಲಿಲ್ಲ.

ಅಂದಿಗೂ, ಇಂದಿಗೂ ಅಮೆಜಾನ್ ನ ಮುಖ್ಯ ಮಂತ್ರ ಮತ್ತು ಸರ್ವಸ್ವ ಅದರ ಗ್ರಾಹಕ. ಈ ಗ್ರಾಹಕ ಕೇಂದ್ರಿತ ಮನೋಭಾವ ಇಂದು ಅಮೆಜಾನ್ ಅನ್ನು ಈ ಹಂತಕ್ಕೆ ತಂದು ನಿಲ್ಲಿಸಿದೆ. ಗ್ರಾಹಕರನ್ನು ಖುಷಿಯಾಗಿಡಲು ಜೆಫ್ ಯಾವ ಹಂತಕ್ಕೂ ಹೋದದ್ದಿದೆ. ತಾನೇ ಸಾಮಾನನ್ನು ಹೋಗಿ ಕೈಯಾರೆ ಕೊಟ್ಟು ಬಂದದ್ದಿದೆ. ಹೆಚ್ಚಿಗೆ ದರದಲ್ಲಿ ಖರೀದಿಸಿದ್ದನ್ನು ಕಮ್ಮಿ ದರಕ್ಕೆ ಮಾರಿದ್ದಿದೆ. ಮೊದಲ ದಿನಗಳಲ್ಲಿ ಕೆಲವರು ಅಮೆಜಾನ್ ಕಳಿಸಿದ ಸಾಮಾನು ನಮಗೆ ತಲುಪಿಲ್ಲ ಎಂದು ಯಾಮಾರಿಸಲು ಫೋನ್ ಮಾಡುತ್ತಿದ್ದರಂತೆ. ಅದು ತಿಳಿದಿದ್ದರೂ ಆತ ಸಾಮಾನನ್ನು ಇನ್ನೊಮ್ಮೆ ಪುಕ್ಕಟೆ ಕಳುಹಿಸಿ ಕೊಡುತ್ತಿದ್ದನಂತೆ. ಇಂದಿಗೂ ಗ್ರಾಹಕ ಕೇಂದ್ರಿತ ಮನೋಭಾವವಿಲ್ಲದವರಿಗೆ ಅಮೆಜಾನ್ ನಲ್ಲಿ ಕೆಲಸವಿಲ್ಲ, ಜಾಗವಿಲ್ಲ. ಇದೇ ಕಾರಣಕ್ಕೆ ಜಗತ್ತಿನಾದ್ಯಂತ ಏನಾದರೂ ಖರೀದಿಸಬೇಕೆಂದರೆ ಹೆಚ್ಚಿನವರಿಗೆ ಮೊದಲು ನೆನಪು ಬರುವುದು ಅಮೆಜಾನ್. ಅದು ಅಮೆಜಾನ್ ನ ಬ್ರಾಂಡ್ ಮೌಲ್ಯ.

ಹೊಸ ಹೊಸ ವಿಚಾರಗಳನ್ನು ಮತ್ತು ಟೆಕ್ನಾಲಜಿಯನ್ನು ಅಳವಡಿಸಿಕೊಳ್ಳುವ ಮತ್ತು ಅದನ್ನು ಕಾರ್ಯಗತಗೊಳಿಸುವ ಮನೋವೃತ್ತಿಯಿಂದ ಜೆಫ್ ಜಗತ್ತಿನ ಹೆಚ್ಚಿನ ವ್ಯಾಪಾರಿಗಳಿಗೆ ಹೊರತಾಗಿ ನಿಲ್ಲುತ್ತಾನೆ. ಇದೇ ಕಾರಣಕ್ಕೆ ಅಮೆರಿಕದಲ್ಲಿ ಕೂತು ಸಾವಿರಾರು ಮೈಲಿ ದೂರದಲ್ಲಿ ಅಜ್ಞಾತ ಸ್ಥಳದಲ್ಲಿರುವ ಚಿಕ್ಕ ಕಿರಾಣಿ ಅಂಗಡಿಗೆ ಪೈಪೋಟಿ ಕೊಡುತ್ತಾನೆ. ಇಂದು ಅಮೆಜಾನ್ ಕಂಪನಿ ಕೈ ಹಾಕದ ವ್ಯಾಪಾರ ವ್ಯವಹಾರವಿಲ್ಲ. ಅಮೆಜಾನ್ ನಲ್ಲಿ ಸಂಗೀತ, ವಿಡಿಯೋ, ಚಲನ ಚಿತ್ರ ಎಲ್ಲವೂ ಲಭ್ಯ. ಅಲ್ಲಿ ಪುಸ್ತಕದ ಧ್ವನಿಸುರಳಿಗಳು ಮಾರಾಟಕ್ಕಿವೆ, ಕಿಂಡಲ್ ನಲ್ಲಿ ಪುಸ್ತಕಗಳನ್ನು ಖರೀದಿಸಬಹುದು ಅಥವಾ ಎರವಲು ಪಡೆಯಬಹುದು.

ಸಾಮಾನ್ಯ ಜನರಷ್ಟೇ ಅಲ್ಲ, ದೊಡ್ಡ ದೊಡ್ಡ ಕಂಪನಿಗಳು ಕೂಡ ಅಮೆಜಾನ್‌ನ ಗ್ರಾಹಕರೇ. ಅದರ ನೆರವು ಪಡೆದು ನಿಮ್ಮದೇ ವೆಬ್ಸೈಟ್ ಸಿದ್ಧಮಾಡಬಹುದು. ನಿಮ್ಮ ಕಂಪನಿಯ ಕಡತಗಳನ್ನು ಭದ್ರವಾಗಿಡಬಹುದು. ನಿಮ್ಮ ಫೋಟೋಗಳನ್ನೂ ಅಮೆಜಾನ್‌ನ ಸರ್ವರ್‌ಗಳಲ್ಲಿ ಶೇಖರಿಸಿಡಬಹುದು ಮತ್ತು ಎಲ್ಲೆಂದರಲ್ಲಿ ಬೇಕಾದಾಗ ಪಡೆಯಬಹುದು. ಹೀಗೆ ಶೇಖರಿಸಿಟ್ಟ ಫೋಟೋಗಳನ್ನು ಒಂದು ಗುಂಡಿ ಒತ್ತುವುದರ ಮೂಲಕ ಫೋಟೋ ಆಲ್ಬಮ್ ಆರ್ಡರ್ ಮಾಡಿ ಮನೆಯಲ್ಲಿ ಕೂತೇ ಪಡೆಯಬಹುದು.

ಅಮೆಜಾನ್ ಇಂದು ಒಂದು ಜಾಗತಿಕ ಅಂಗಡಿ. ಟಾಂಜೇನಿಯಾದಲ್ಲೋ ಅಥವಾ ದಕ್ಷಿಣ ಭಾರತದ ಮೂಲೆಯಲ್ಲಿ ಸಿದ್ಧವಾದ ಒಂದು ವಸ್ತುವನ್ನು ಅಮೆಜಾನ್ ನ ಮೂಲಕ ಇಂಗ್ಲೆಂಡ್ ಅಥವಾ ಅಮೆರಿಕದ ಗ್ರಾಹಕರಿಗೆ ಮಾರಾಟ ಮಾಡಬಹುದು. ಬಳಸಿದ ಸೆಕೆಂಡ್ ಹ್ಯಾಂಡ್ ವಸ್ತುಗಳನ್ನು ಮಾರಾಟ ಮಾಡಲೂ ಇಲ್ಲಿ ಅವಕಾಶವಿದೆ. ಯಾವುದೇ ಒಬ್ಬ ವ್ಯಕ್ತಿಗೆ ತನ್ನ ಜೀವನಕ್ಕೆ ಮತ್ತು ವ್ಯವಹಾರಕ್ಕೆ ಬೇಕಾಗುವ ಎಲ್ಲ ಸಾಮಾನುಗಳು ಇಲ್ಲಿ ಲಭ್ಯ; ಬೇಬಿ ಪೌಡರ್‌ನಿಂದ ಹಿಡಿದು ಅಪರ ಕಾರ್ಯಕ್ಕೆ ಬೇಕಾಗುವ ವಸ್ತುಗಳ ತನಕ ಎಲ್ಲವೂ ಬೆರಳಂಚಿನಲ್ಲಿ. ಇಂದು ಜಗತ್ತಿನ ಶೇ. 64ರಷ್ಟು ಜನ ಅಮೆಜಾನ್ ನ ಒಂದಿಲ್ಲೊಂದು ಸೇವೆ ಪಡೆದುಕೊಂಡಿದ್ದಾರೆ ಎನ್ನುವುದು ಒಂದು ಗಣನೆ.

ಈಗಾಗಲೇ ಪರೀಕ್ಷಾರ್ಥ ಮಾನವ ರಹಿತ ರಾಕೆಟ್ ಅಂತರಿಕ್ಷಕ್ಕೆ ಹೋಗಿ ಮರಳಿದೆ. ಅಮೆರಿಕದ ಸರಕಾರದ ಅನುಮತಿ ಸಿಕ್ಕರೆ ಸದ್ಯದಲ್ಲೇ ಸಾಮಾನ್ಯ ಜನರೂ ಅಂತರಿಕ್ಷದಲ್ಲೊಂದು ರೌಂಡ್ ಹಾಕಿ ಬರಬಹುದು.

ಅಮೆಜಾನ್ ನಲ್ಲಿ ದಿನಸಿ ಸಾಮಾನನ್ನು ಆರ್ಡರ್ ಮಾಡಿದ ಕೆಲವು ನಿಮಿಷಗಳಲ್ಲಿ ಡ್ರೋನ್ ಮೂಲಕಗ್ರಾಹಕರ ಬಾಲ್ಕನಿಗೆ ತಲುಪಿಸಿವುದು ಜೆಫ್ ನ ಮುಂದಿನ ಯೋಚನೆ. ಅದಕ್ಕಾಗಿಯೇ ಅಮೆರಿಕದ ಪ್ರಮುಖ ಕಿರಾಣಿ ಅಂಗಡಿ ಸರಣಿಯಾದ ಹೋಲ್ ಫುಡ್ ಅನ್ನು ಖರೀದಿಸಿದ್ದಾಗಿದೆ. ಅಮೆರಿಕದಲ್ಲಿ ಅಮೆಜಾನ್ ಕ್ಯಾಶಿಯರ್ ಇಲ್ಲದ ಹಲವು ಅಂಗಡಿಗಳನ್ನು ತೆರೆದಿದೆ. ನೀವು ಅಲ್ಲಿ ಅಮೆಜಾನ್ ಕಾರ್ಡ್ ಕಿಸೆಯಲ್ಲಿ ಇಟ್ಟುಕೊಂಡು ಹೋಗಿ ಸಾಮಾನು ಎತ್ತಿಕೊಂಡು ಬಂದರಾಯ್ತು. ನಿಮ್ಮ ಕಿಸೆಯಲ್ಲಿನ ಕಾರ್ಡ್ ನಿಂದ ಮತ್ತು ಆ ಸಾಮಾನಿಗೆ ಅಂಟಿಕೊಂಡ ಒಂದು ಚಿಕ್ಕ 'ಚಿಪ್'ನಿಂದ ಏನು ತೆಗೆದುಕೊಂಡು ಬಂದಿದ್ದೀರೋ ಅದರ ಮೌಲ್ಯವನ್ನು ನಿಮ್ಮ ಕ್ರೆಡಿಟ್ ಕಾರ್ಡ್ ಗೆ ಶುಲ್ಕ ಹಾಕಲಾಗುತ್ತದೆ.

ಜೆಫ್ ನ ಈ ತೆರನಾದ ಆಕ್ರಮಣಕಾರೀ ಓಟದಲ್ಲಿ ಇಂದು ಹಲವು ಕಂಪನಿಗಳು ಪ್ರತಿ ಸ್ಪರ್ಧಿಸಲಾಗದೇ ಬಾಗಿಲು ಮುಚ್ಚಿವೆ. ನೂರಾರು ಕಂಪನಿಗಳು, ಚಿಕ್ಕ ಮತ್ತು ಮಧ್ಯಮ ವ್ಯಾಪಾರಿಗಳು ದಿವಾಳಿಯಾಗುವತ್ತ ಸಾಗುತ್ತಿದ್ದಾರೆ. ಇಂದು 50ಕ್ಕೂ ಹೆಚ್ಚಿನ ದೇಶಗಳಲ್ಲಿ ಆನ್‌ಲೈನ್ ವ್ಯಾಪಾರದಲ್ಲಿ ಅಮೆಜಾನ್‌ದೇ ಸಿಂಹ ಪಾಲು. ಅಮೆಜಾನ್ ಅದ್ಯಾವ ಪರಿಯ ಪೈಪೋಟಿ ನೀಡಬಲ್ಲದು ಎನ್ನುವುದಕ್ಕೆ ಭಾರತವೇ ಸಾಕ್ಷಿ. ಇಲ್ಲಿನ ಫ್ಲಿಪ್ ಕಾರ್ಟ್ ಮೊದಲಾದ ಹಲವು ಕಂಪನಿಗಳು ಅದಾಗಲೇ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ ಆದಮೇಲೆ ಅಮೆಜಾನ್ ಭಾರತಕ್ಕೆ ಬಂದರೂ ಈಗ ಅದಾಗಲೇ ಫ್ಲಿಪ್ ಕಾರ್ಟ್ ಗಿಂತ ಹೆಚ್ಚಿನ ಮೌಲ್ಯದ ಸಾಮಾನನ್ನು ಮಾರಾಟ ಮಾಡಿ ದಾಖಲೆ ನಿರ್ಮಿಸಿದೆ. ಭಾರತದ ನಂಬರ್ ಒನ್ ಆನ್‌ಲೈನ್ ಅಂಗಡಿಯಾಗುವ ಸಮಯವೂ ದೂರವಿಲ್ಲ.




ಇನ್ನು ಅಮೆಜಾನ್ ಒಂದು ವಸ್ತುವನ್ನು ಹೇಗೆ ಉತ್ಪಾದಕರಿಂದ, ಗ್ರಾಹಕರವರೆಗೆ ತಲುಪಿಸುತ್ತದೆ ಎನ್ನುವುದೇ ಒಂದು ರೋಮಾಂಚಕಥೆ. ಅದನ್ನು ವಿವರಿಸಲು ಹೊರಟರೆ ಒಂದು ಪುಸ್ತಕವನ್ನೇ ಬರೆಯಬೇಕಾಗಬಹುದು. ಪ್ರತಿ ದಿನ ಕೋಟಿಗಟ್ಟಲೆ ವಸ್ತುಗಳನ್ನು 50ಕ್ಕೂ ಹೆಚ್ಚು ದೇಶಗಳಿಗೆ ಒಂದಿನಿತೂ ಆಚೀಚೆಯಾಗದೇ ಸಾಗಿಸುವ ಬೃಹತ್ ವ್ಯವಸ್ಥೆ ನಿಜ ಅರ್ಥದಲ್ಲಿ 'ಅದ್ಭುತ'ವೇ ಸರಿ. ಅದರ ಮೂಲ ವಿನ್ಯಾಸ ಸ್ವತಃ ಜೆಫ್‌ನದೇ. ಇಂದು ಅಮೆರಿಕವೊಂದರಲ್ಲೇ ಹತ್ತಾರು 'ಡಾರ್ಕ್ ವೇರ್‌ಹೌಸ್'ಗಳಿವೆ. ಈ ಗೋದಾಮುಗಳಿಗೆ ಕಿಟಕಿಗಳಿಲ್ಲ- ಬೆಳಕು ಬೇಕಾಗಿಲ್ಲ. ಇಲ್ಲಿ ಆರ್ಡರ್ ಬಂದಾಗ ರೋಬೋಟ್ ಗಳು ಆ ಸಾಮಾನುಗಳನ್ನು ಶೆಲ್ಫಿನಿಂದ ತಂದು, ಪ್ಯಾಕ್ ಮಾಡಿ, ಅಡ್ರೆಸ್ ಹಚ್ಚಿ ಪೋಸ್ಟ್ ಗಾಡಿಯವರೆಗೆ ತಂದುಕೊಡುತ್ತವೆ. ಇವು ಮನುಷ್ಯರೇ ಇಲ್ಲದ ಗೋದಾಮು.

ಜೆಫ್ ತನ್ನ ಅಮೆಜಾನ್ ಕಂಪನಿಯನ್ನು ಕೇವಲ ಅಮೆಜಾನ್.ಕಾಮ್ ನಲ್ಲಿ ಸಾಮಾನು ಮಾರಾಟಕ್ಕಷ್ಟೇ ಸೀಮಿತಗೊಳಿಸಲಿಲ್ಲ. ಸುಮ್ಮನೆ ಒಂದು ಮಾಡಿ ಕೂರುವ ಮನಸ್ಥಿತಿಯೇ ಅವನದು? ಆತ ಇದರೊಂದಿಗೆ ಸುಮಾರು ನಲ್ವತ್ತಕ್ಕೂ ಹೆಚ್ಚು ಕಂಪನಿಯನ್ನು ಖರೀದಿಸಿದ್ದಾನೆ. ಹೊಸ ಹೊಸ ಹಲವು ಕಂಪನಿಗಳನ್ನು ಹುಟ್ಟು ಹಾಕಿದ್ದಾನೆ. ಉದಾಹರಣೆಗೆ, ಆತನ 'ಬ್ಲೂ ಒರಿಜಿನ್' ಎನ್ನುವ ಕಂಪನಿ ಪ್ರಯಾಣಿಕರನ್ನು ರಾಕೆಟ್‌ನಲ್ಲಿ ಅಂತರಿಕ್ಷಕ್ಕೆ ಪ್ರವಾಸಕ್ಕೆ ತೆಗೆದುಕೊಂಡು ಹೋಗಲು ಈಗ ಸಿದ್ಧತೆ ನಡೆಸುತ್ತಿದೆ.

ಜೆಫ್ ಬಿಜೋಸ್ ಅಮೆರಿಕದ ಪ್ರಸಿದ್ಧ ಪತ್ರಿಕೆ 'ವಾಷಿಂಗ್ಟನ್ ಪೋಸ್ಟ್' ನ ಮಾಲೀಕ ಕೂಡ. ಈ ಪತ್ರಿಕೆ ಅದ್ಯಾರ ಹಂಗಿಗೂ ಬೀಳದೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನ ಹತ್ತು ಹಲವು ಯಡವಟ್ಟುಗಳನ್ನು ಪ್ರಕಟಿಸಿತು. ಇದರಿಂದ ಟ್ರಂಪ್ ನ ಕೆಂಗಣ್ಣಿಗೆ ಜೆಫ್ ಒಳಗಾಗಬೇಕಾಯಿತು. ಉಹ್ಞುಂ, ಅದ್ಯಾವುದಕ್ಕೂ ಜೆಫ್ ಬಗ್ಗಲಿಲ್ಲ. ಮೊನ್ನೆ ಜೆಫ್‌ನ ನಗ್ನ ಚಿತ್ರವೊಂದು ಒಂದು ಕಂಪನಿಯ ಬಳಿ ಇದೆ ಎಂಬ ಸುದ್ದಿ ಜೆಫ್ ಗೆ ಸಿಕ್ಕಿತು. ತನ್ನ ಪತ್ರಿಕೆಯ ತನಿಖಾ ತಂಡಕ್ಕೆ ಏನು ಮಾಡಬೇಕೆಂದು ಸೂಚಿಸಿದ. ತಕ್ಷಣ ಆ ಚಿತ್ರ ಇಟ್ಟುಕೊಂಡ ಕಂಪನಿ ಜೆಫ್‌ಗೆ ಒಂದು ಇಮೇಲ್ ಹಾಕಿತು. ನೀವು ಆ ತನಿಖೆಯನ್ನು ಕೂಡಲೇ ನಿಲ್ಲಿಸದಿದ್ದರೆ ನಿಮ್ಮ ನಗ್ನ ಚಿತ್ರವನ್ನು ಇಂಟರ್ನೆಟ್ ನಲ್ಲಿ ಹೊರಹಾಕಲಾಗುವುದು ಎಂದು. ಆದರೆ ಆ ಇಮೇಲ್ ಗೆ ಉತ್ತರವಾಗಿ ನನಗೆ ಈ ಇಮೇಲ್ ಸಿಕ್ಕಿದೆ, ಇಷ್ಟು ಸಾಕು. ಧನ್ಯವಾದ ಎಂದು ಆ ಪತ್ರವನ್ನೇ ತನ್ನ ಪತ್ರಿಕೆಯಲ್ಲಿ ಪ್ರಕಟಿಸಿಬಿಟ್ಟ, ಜೆಫ್! ಇಂತಹ ನೂರಾರು ಘಟನೆಗಳನ್ನು ತನ್ನ ವೃತ್ತಿ ಜೀವನದಲ್ಲಿ ದಿಟ್ಟತನದಲ್ಲೇ ಆತ ಎದುರಿಸಿದ್ದಾನೆ.

ಇಂದು ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಯಾದ ಜೆಫ್, ಒಬ್ಬ ವ್ಯಕ್ತಿಯ ಪರಿಶ್ರಮ, ಪ್ರಾಮಾಣಿಕತೆ, ದಿಟ್ಟತನ ಮತ್ತು ಇತಿಹಾಸವೊಂದನ್ನು ನಿರ್ಮಾಣ ಮಾಡಬೇಕೆಂಬ ಛಲಕ್ಕೆ ಜೀವಂತ ನಿದರ್ಶನವಾಗಿ ಅಮೆಜಾನ್‌ನಂತಹ ಅಭೂತಪೂರ್ವ ಸಾಮ್ರಾಜ್ಯವನ್ನು ಕಟ್ಟಿ ತೋರಿಸಿದ್ದಾನೆ.